ಉಪನಿರ್ದೇಶಕರು (ಆಡಳಿತ) ರವರ ಕಚೇರಿ

ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 33K– ದ್ವಿತೀಯ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 80** **ಸಮಯ : 03.00ಗಂಟೆಗಳು**

*************************************************************************************

## ಅಭ್ಯಾಸ ಪತ್ರಿಕೆ–2

*************************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4X1=4**

1. 'ಬಾಣವನ್ನು' ಪದದಲ್ಲಿರುವ ವಿಭಕ್ತಿ ಪ್ರತ್ಯಯ.
   ಎ) ಉ ಬಿ) ಅನ್ನು
   ಸಿ) ಇಂದ ಡಿ) ಗೆ
2. ಗುಣಸಂಧಿಗೆ ಉದಾಹರಣೆಯಾದ ಪದ.
   ಎ) ಸರ್ವಾಧಿಕಾರಿ ಬಿ) ಬೆನ್ನೆಲುಬು
   ಸಿ) ಮೇಲೇರಿ ಡಿ) ವೀರೇಶ್ವರ
3. ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳು ಸಂಖ್ಯೆ.
   ಎ) ಮೂರು ಬಿ) ನಾಲ್ಕು
   ಸಿ) ಆರು ಡಿ) ಐದು
4. 'ಕುಪ್ಪಳ್ಳಿ' ಪದವು ನಾಮಪದದ ಈ ಪ್ರಕಾರಕ್ಕೆ ಸೇರಿದೆ.
   ಎ) ಸರ್ವನಾಮ ಬಿ) ರೂಢನಾಮ
   ಸಿ) ಅಂಕಿತನಾಮ ಡಿ) ಅನ್ವರ್ಥನಾಮ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **12X1=12**

5. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?
6. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು?
7. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?
8. ಗುರುಗಳು ಜೀವನವನ್ನು ಯಾವುದಕ್ಕೆ **ಹೋಲಿಸಿದ್ದಾರೆ**?
9. ಹೆಡ್ ಮಾಸ್ತರರು ಏಕೆ ಸಂತೋಷಗೊಂಡರು?
10. ಗೋಪಾಲನು ಶಾಲೆಯಿಂದ ಮರಳುವಾಗ ಏಕೆ ಭಯಪಡುತ್ತಿದ್ದನು?
11. ಏಣಿ ಜನರಿಗೆ ಮಾಡಿದ ಉಪಕಾರವೇನು?
12. ಸಿದ್ಧಾರ್ಥನು ಕಾಡಿನಿಂದ ನಾಡಿಗೆ ಹೊರಟಿದ್ದು ಏಕೆ?
13. ಜಗ ಖಗ ಪಕ್ಷಿ ಪ್ರಾಣಿಗಳು ಮೈಕೊಡವಿ ಎದ್ದು ಎಲ್ಲಿಗೆ ಹೊರಟಿವೆ?
14. ಮನಸ್ಸು ಯಾವಾಗ ನೆಲೆಯಿರದೆ ತೊಳಲುತ್ತದೆ?
15. ಕುಣಿಗಲ್ ಕೆರೆಯು ಹೇಗೆ ಬಾಗಿದೆ?
16. ಉತ್ತರನಿಗೆ ಬಲಗಡಲಿನಂತೆ ಕಂಡ ಸೈನ್ಯ ಯಾವುದು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **8X2=16**

17. ರೈತರು ಉಳುವುದನ್ನು ಬಿಟ್ಟು ಸತ್ಯಾಗ್ರಹ ಮಾಡಿದರೆ ಉಂಟಾಗುವ ಸಮಸ್ಯೆಗಳಾವುವು?
18. ಪುಟ್ಟರಾಜರಿಗೆ ಯಾವ ಯಾವ ಪ್ರಶಸ್ತಿಗಳು ದೊರೆತಿವೆ?
19. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?
20. ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ?

21. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು?
22. ಅಡಿಗರು ಯಾವುದನ್ನು ಹೇಡಿತನ ಹಾಗು ಹೆಣ್ತನ ಎಂದು ಕರೆದಿದ್ದಾರೆ?
23. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದ ಬಗೆಯನ್ನು ತಿಳಿಸಿ.
24. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕೆಂದು ಕವಯಿತ್ರಿಯ ಆಶಯವಾಗಿದೆ?

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **1X3=3**

25. ಸಿ.ಪಿ. ಕೃಷ್ಣಕುಮಾರ್

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1X3=3**

26. ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು
ಬರಡು ಜೀವಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ
ಚಿಲಿಪಿಲಿಯ ಕಲರವಕೆ ಮತ್ತೇರಿದೆ

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1X3=3**

27. 'ಪುಟ್ಟರಾಜರು ಕೋಗಿಲೆಯಂತೆ ಸುಮಧುರವಾಗಿ ಹಾಡುತ್ತಿದ್ದರು'

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1X3=3**

28. ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು

**ಅಥವಾ**

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5X3=15**

29. ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ
30. ಈ ನೇರಿಲ ಹಣ್ಣು ಎಷ್ಟು ಕಪ್ಪಾಗಿವೆ
31. ನನಗೆ ಬೀಳುವ ಭಯವಿಲ್ಲ
32. ಬಾವ ತಂದಾನೆ ಬಣ್ಣದ ಸೀರೆ
33. ನಾಡನರಿವೊಲು ಹಲುಗಿರಿಯ ಬಿಡುವೆನೆ

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1X4=4**

34. ನೀರ ಕಂಡಲ್ಲಿ ______________________
______________________
______________________
______________________ಕೂಡಲಸಂಗಮದೇವ.

**ಅಥವಾ**

ಮರವಿದ್ದು ಫಲವೇನು ______________________
______________________
______________________
______________________ಚೆನ್ನಮಲ್ಲಿಕಾರ್ಜುನ.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1X4=4**

35. ಗಿಳಿಯ ವರ್ತನೆಯಲ್ಲಿ ನೀವು ಮೆಚ್ಚಿದ ಅಂಶಗಳನ್ನು ವರ್ಣಿಸಿ ಬರೆಯಿರಿ.

**ಅಥವಾ**

ಗಿಳಿ ಮತ್ತು ಇಂದ್ರನ ನಡುವಿನ ಸಂಭಾಷಣೆ ಸಾರಸ್ವವನ್ನು ವರ್ಣಿಸಿ ಬರೆಯಿರಿ.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1X4=4(2+2)**

ಕಪಿಮಾನವನಿಗೆ ಚಿಂತನಶಕ್ತಿ ತುಂಬಾ ಕಡಿಮೆ. ಮೊದಲಲ್ಲಿ ಅವನಿಗೂ ಉಳಿದ ಪ್ರಾಣಿಗಳಿಗೂ ಹೆಚ್ಚು ವ್ಯತ್ಯಾಸವಿರಲಿಲ್ಲ. ಪ್ರಕೃತಿಯ ಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿ ಅವನಿಗಿರಲಿಲ್ಲ. ಒಂದು ವಿಧದಲ್ಲಿ ಅವನು ಸ್ಥಿತ ಪ್ರಜ್ಞ. ಹಸಿವಾದಾಗ ಬೇಟೆಯಾಡಿಕೊಂಡು, ಗೆಡ್ಡೆ ಗೆಣಸು ತಿಂದುಕೊಂಡು ಕಾಡು ಮನುಷ್ಯನ ಹಾಗೆ ಬದುಕುತ್ತಿದ್ದನು. ಕಾಲಕ್ರಮೇಣ ಸ್ವಲ್ಪ ಕಣ್ಣುಬಿಟ್ಟು ಸುತ್ತಮುತ್ತಣ ಚಟುವಟಿಕೆಗಳನ್ನು ಮನಸ್ಸಿಟ್ಟು ನೋಡಲು ಪ್ರಯತ್ನಪಟ್ಟನು. ಇಷ್ಟಾದರೂ ಪ್ರಕೃತಿಯ ಎಲ್ಲಾ ಕ್ರಿಯೆಗಳೂ ಸಹಜವೇ! ಕೈಯಿಂದ ಕಳಚಿಬಿದ್ದ ಕಲ್ಲು ಕೆಳಗೆ ಬೀಳಲೇಬೇಕು. ಮೇಲಕ್ಕೆ ಬಿಸಾಡಿದ ಕಲ್ಲಿನ ಅವಸ್ಥೆಯೂ ಅಷ್ಟೆ. ಏಕೆ?, ಹೇಗೆ? ಎನ್ನುವ ಪದಗಳು ಇನ್ನೂ ಹುಟ್ಟಿರಲಿಲ್ಲ. ಹುಟ್ಟಿದ ಮೇಲೂ ಇಂತಹ ಸಹಜ ಕ್ರಿಯೆಗಳಿಗೆ ಅವುಗಳ ಬಳಕೆ ತೀರಾ ಹಾಸ್ಯಾಸ್ಪದವಾಗಿದ್ದಿತು. ಈಗಲೂ ಸಂಪ್ರದಾಯವಾದಿಗಳಿಗೆ ಪ್ರಶ್ನೆ ಪತ್ರಿಕೆಗಳು ಅಷ್ಟಾಗಿ ಹಿಡಿಸುವುದಿಲ್ಲ.

ಪ್ರಾಣಿಗಳಿಗೂ ಮತ್ತು ಮನುಷ್ಯನಿಗೂ ಇರುವ ಮುಖ್ಯ ವ್ಯತ್ಯಾಸ ವಿವೇಚನೆ ಮತ್ತು ವಾಕ್‌ಶಕ್ತಿ. ಉಳಿದ ಎಷ್ಟೋ ವಿಷಯಗಳಲ್ಲಿ ಮನುಷ್ಯ ಪ್ರಾಣಿಗಿಂತ ಕೀಳು. ಅನೇಕ ಪ್ರಾಣಿಗಳು ಮನುಷ್ಯನಿಗಿಂತ ಬಲಿಷ್ಠವಾಗಿವೆ. ಆನೆಗೂ ಮನುಷ್ಯನಿಗೂ ಅಜಗಜಾಂತರ. ಜಿಂಕೆ ಕುದುರೆಗಳ ವೇಗವೆಲ್ಲಿಂದ ಬಂದೀತು ಮನುಷ್ಯನಿಗೆ. ಕೃತಜ್ಞತೆ ನಾಯಿಗೆ ಸಹಜ. ಕೃತಜ್ಞತೆಯ ಮೇಲೆ ಪುಂಖಾನುಪುಂಖವಾಗಿ ಭಾಷಣ ಮಾಡುವವನೂ ಕೂಡ ಈ ವಿಷಯದಲ್ಲಿ ನಾಯಿಗೆ ಸಮನಾಗುತ್ತಾನೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಕತ್ತೆಗಿರುವ ತಾಳ್ಮೆ ಮನುಷ್ಯನಿಗಿಲ್ಲ. ಹೀಗೆ ಮನುಷ್ಯ ಎಷ್ಟೋ ವಿಷಯಗಳಲ್ಲಿ ಯಃಕಶ್ಚಿತ್ ಜಂತು. ಆದಾಗ್ಯೂ ತನ್ನ ವಿಚಾರ ಶಕ್ತಿಯಿಂದ ಸರ್ವಶ್ರೇಷ್ಠ ಪ್ರಾಣಿಯಾಗಿದ್ದಾನೆ.

36. ಅ) ಕಪಿ ಮಾನವನ ವರ್ತನೆಗಳು ಹೇಗಿದ್ದವು?

ಆ) ಪ್ರಾಣಿಗಳು ಮನುಷ್ಯನಿಗಿಂತ ಬಲಿಷ್ಠವಾಗಿದ್ದವು ಹೇಗೆ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.** **1X4=4**

37. ವಾಯುಮಾಲಿನ್ಯಕ್ಕೆ ಕಾರಣಗಳು ಮತ್ತು ನಿವಾರಣೋಪಾಯಗಳು

**ಅಥವಾ**

ನಿರುದ್ಯೋಗ ಸಮಸ್ಯೆ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1X5=5**

38. ನಿಮ್ಮನ್ನು ಶಿವಮೊಗ್ಗ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ರವಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ಗ್ರಂಥಾಲಯಕ್ಕೆ ಕನ್ನಡ ಪುಸ್ತಕಗಳನ್ನು ಕಳುಹಿಸಿಕೊಡುವಂತೆ ಕೋರಿ ಕನ್ನಡ ಸಾಹಿತ್ಯ ಪರಿಷತ್ತಿನ ವ್ಯವಸ್ಥಾಪಕರಿಗೆ ಒಂದು ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ಪ್ರಣವ್' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ವಿಶ್ವಪರಿಸರ ದಿನಾಚರಣೆಯನ್ನು ಕುರಿತು ಮಂಗಳೂರಿನ ಕೀರ್ತಿ ಎಂಬ ನಿಮ್ಮ ಗೆಳತಿಗೆ ಒಂದು ಪತ್ರ ಬರೆಯಿರಿ.

*****